ಅಜ್ಜ ಸುಬ್ಬರಾಯರಿಂದ ವಯೊಲಿನ್ ಪಾಠವೂ ಆಗಿತ್ತು. ಆದ್ದರಿಂದ ಶಿವಮೊಗ್ಗದಲ್ಲಿ ಲಾಲ್‌ಗುಡಿ ಜಿ. ಜಯರಾಮನ್ ಅವರ ಶಿಷ್ಯರಾಗಿದ್ದ, ಗುರು ಎಚ್.ಕೆ. ವೆಂಕಟ್ರಾಮ್ ಅವರ ಬಳಿ ವಯೊಲಿನ್ ಕಲಿಯುವ ಅವಕಾಶ ದೊರೆಯಿತು. ಬೆಳಿಗ್ಗೆ ಹೊಸಹಳ್ಳಿಗೆ ಸೈಕಲ್‌ನಲ್ಲಿ ತೆರಳಿ 7.30ರಿಂದ 10ಗಂಟೆಯವರೆಗೆ ಸಂಗೀತ ಕಲಿಕೆ ಮತ್ತು ಅಭ್ಯಾಸ ಮುಗಿಸಿ ನಂತರ ನಾನು ಕಾಲೇಜಿಗೆ ಹೋಗುತ್ತಿದ್ದೆ. ನಿಜ ಹೇಳಬೇಕೆಂದರೆ ನನಗೆ ನಾನು ಕಲಿಯುತ್ತಿರುವ ಸಂಗೀತದ ಮಹತ್ವ ಅರಿವಾದುದು ಈ ಹಂತದಲ್ಲಿಯೇ ಎನ್ನಬೇಕು. ಮನೆಯಿಂದ ದೂರವಿದ್ದ ನನಗೆ ಮನೆಯ ನೆನಪುಗಳು ಬಹಳವಾಗಿ ಕಾಡುತ್ತಿದ್ದವು. 'ಹೋಮ್‌ಸಿಕ್' ಎನ್ನುತ್ತಾರಲ್ಲ, ಹಾಗೆಯೇ ಆಗಾಗ ಅಳು ಬಂದುಬಿಡುತ್ತಿತ್ತು. ಬೆಳ್ತಂಗಡಿ-ಧರ್ಮಸ್ಥಳ ಕಡೆಗೆ ಹೋಗುವ ಬಸ್ಸು ನೋಡಿಯೂ ಮನದೊಳಗೆ ಅಳು ಬರುತ್ತಿತ್ತು. ಆದರೆ ಆ ನೋವಿಗೆ ಮದ್ದಾಗಿದ್ದು ವಯೊಲಿನ್ ಶಿಕ್ಷಣ. ಕಲಿಕೆಯು ಸಾಗುತ್ತಿದ್ದಂತೆಯೇ ಮನದೊಳಗೆ ಒಂದು ಕನಸು ರೂಪು ಪಡೆಯಲಾರಂಭಿಸಿತು. ನಾನು ಚೆನ್ನಾಗಿ ಸಂಗೀತ ಕಲಿತು ಅಮ್ಮನ ಮುಂದೆ ನುಡಿಸಬೇಕು ಎಂಬುದಾಗಿ. ಈ ಕನಸು ಎಷ್ಟೊಂದು ರಮ್ಯವಾಗಿತ್ತು ಎಂದು ನಾನು ಹೇಳಲೇಬೇಕು. ರಾ... ರಾ.. ವೇಣು ಗೋಪಾ... ಬಾಲಾ ಹಾಗೂ ಇನ್ನೂ ಒಂದರೆಡು ವರ್ಣಗಳನ್ನು ಕಲಿತಿದ್ದೆ. ನಾನು ಶಿವಮೊಗ್ಗದಿಂದ ಬೆಳ್ತಂಗಡಿಗೆ ಹೋಗುವ ರಾತ್ರಿಯ ಬಸ್ಸು ಹತ್ತಿ ಕುಳಿತೆ. ಇದು ಸುಮಾರು ಎಪ್ಪತ್ತರ ದಶಕದ ಸಂದರ್ಭ. ಬಸ್ಸಿನೊಳಗೆ ಮಂದ ಬೆಳಕು ಮಿನುಗುತ್ತಿತ್ತು. ನಿಧಾನವಾಗಿ ಬಸ್ಸು ಸಾಗಲಾರಂಭಿಸಿದಂತೆಯೇ ನನಗೆ ಜೊಂಪು ಹತ್ತಿತ್ತು. ನಿದ್ದೆಯೇನಲ್ಲ. ಆದರೆ ಮನದ ಅಂಗಣದಲ್ಲಿ ಒಂದು ವಿಶಾಲವಾದ ಸಭಾಂಗಣದ ಚಿತ್ರವು ಮೆಲ್ಲಮೆಲ್ಲನೆ ಅನಾವರಣಗೊಳ್ಳಲಾರಂಭಿಸಿತು. ಅಲ್ಲಿ ಶ್ರೋತೃಗಳು ಕಿಕ್ಕಿರಿದು ಕುಳಿತಿದ್ದರು. ನಾನು ರಾ... ರಾ.. ವೇಣು, ಗೋಪಾ... ಬಾಲಾ..., ರಾಜಿತ ಸದ್ಗುಣ ಜಯಶೀಲ...' ಎಂಬ ಹಾಡನ್ನು ನುಡಿಸುತ್ತಿದ್ದೆ. ಅಲ್ಲಲ್ಲಿ ಶಹಬ್ಬಾಸ್, ಚಪ್ಪಾಳೆಗಳ ಸದ್ದು ಕಿವಿಯನ್ನು ಅಪ್ಪಳಿಸುತ್ತಿತ್ತು... ಇಡೀ ವೇದಿಕೆಯೇ ರಂಗೇರಿ ಜನರು ಕಛೇರಿಯ ಕೊನೆಗೆ ಎದ್ದು ನಿಂತು ಪ್ರಶಂಸೆಯ ಚಪ್ಪಾಳೆಯನ್ನು ತಟ್ಟುತ್ತಿದ್ದರು. ನಾನು ವಿನೀತನಾಗಿ ವಯೊಲಿನ್‌ನೊಂದಿಗೆ ನಿಂತಿದ್ದೆ. ಯಾರೋ ಬಂದು ನನಗೆ ಶಾಲು ಹೊದೆಸಿ ಅಭಿನಂದಿಸಿದರು. ಚಪ್ಪಾಳೆಗಳ ಗುಂಗಿನಲ್ಲಿಯೇ ತೇಲುತ್ತಿರುವಾಗ ಬಸ್ಸು ನಿಂತಿರಬೇಕು. ಎಂಥಾ ಕನಸು ಒಡೆದು ವಾಸ್ತವಕ್ಕೆ ಬಂದು ಬಿಟ್ಟೆ. 'ಅಬ್ಬಾ...' ಎಂಥಾ ಕನಸು ಕಂಡೆ ನಾನು ಎಂದು ಎಚ್ಚರಗೊಂಡು ಅಕ್ಕಪಕ್ಕ ನೋಡಿದೆ. ಆದರೆ, ಸಂಗೀತವನ್ನು ಕಲಿಯುವ ಆಸಕ್ತಿ ಹೊಂದಿದವರು ಇಂಥ ಗುಂಗಿಗೆ ಬೀಳಬೇಕು. ನಾನು ಸಾಧಿಸಬೇಕು ಎನ್ನುವ ಚಪಲವನ್ನು ಬೆಳೆಸಿಕೊಳ್ಳಬೇಕು.

◆ **ಸುಂದರ ಕನಸು. ನಿಮ್ಮ ಈ ಕನಸು ಇಂದು ನನಸಾಗಿದೆ. ದೇಶ- ವಿದೇಶಗಳ ವೇದಿಕೆಗಳಲ್ಲಿ ನೀವು ವಯೊಲಿನ್ ನುಡಿಸಿದ್ದೀರಿ. ಪ್ರಸಿದ್ಧ ಗಾಯಕರಿಗೆ ಸಾಥ್ ಕೊಟ್ಟಿದ್ದೀರಿ... ನಿಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದೇ?**

ವಯೊಲಿನ್ ವಾದಕರಿಗೆ ಇರುವ ಅನುಕೂಲಗಳಿವು. ಅವರು ಏಕವ್ಯಕ್ತಿ ಕಛೇರಿಗಳನ್ನೂ ಕೊಡಬಹುದು. ಗಾಯಕರಿಗೆ ಪಕ್ಕವಾದ್ಯದಲ್ಲಿಯೂ ನುಡಿಸಿ ಸಹಕರಿಸಬಹುದು. ಈ ಎರಡೂ ಕಛೇರಿಗಳಲ್ಲಿ ಅವುಗಳದ್ದೇ ಸಂತೋಷವಿದೆ. ಅದನ್ನು ಕಂಡುಕೊಳ್ಳುವ ಸವಾಲನ್ನು ವಯೊಲಿನ್ ವಾದಕರು ಅರ್ಥಮಾಡಿಕೊಳ್ಳಬೇಕು. ಮೊದಲನೆಯದಾಗಿ ಏಕವ್ಯಕ್ತಿ ಕಛೇರಿಗಳಲ್ಲಿ ತಮ್ಮ ತಂಡದೊಂದಿಗೆ ತಾವೇ ಮುಂದೆ ಸಾಗುವುದು ವಾಡಿಕೆ. ಆದರೂ ಅವರನ್ನು ಪರಿಗಣಿಸಿಕೊಂಡು ಕಛೇರಿಯನ್ನು ಮುನ್ನಡೆಸಬೇಕು. ಪಕ್ಕವಾದ್ಯದಲ್ಲಿ ಸಹಕರಿಸುವಾಗ ಗಾಯಕರ ಮರ್ಜಿಯನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಹಲವಾರು ಪ್ರಸಿದ್ಧ ಗಾಯಕರಿಗೆ ಕಛೇರಿಯಲ್ಲಿ ನಾನು ವಯೊಲಿನ್ ನುಡಿಸಿದ್ದೇನೆ. ನನ್ನ ಗುರುಗಳ ಕಛೇರಿಗೆ ವಯೊಲಿನ್ ನುಡಿಸಿದ್ದೇನೆ. ಅವರ ಶಿಷ್ಯಂದಿರಾಗಿ ಪ್ರಸಿದ್ಧರಾದ ಜ್ಞಾನ ಸುಂದರಂ, ಪದ್ಮಾಶಂಕರ್ ಮುಂತಾದವರ ಕಛೇರಿಗೆ ವಯೊಲಿನ್ ನುಡಿಸಿದ್ದೇನೆ. ಶೇಷಗೋಪಾಲ್ ಶಂಕರ ನಾರಾಯಣ್, ಪ್ರಸಿದ್ಧ ಗಾಯಕರಾದ ಬಾಲಮುರಳೀಕೃಷ್ಣ... ಅವರಿಗೂ ವಯೊಲಿನ್ ನುಡಿಸುವ ಅವಕಾಶ

